ಬ್ಯಾಗಿಗೆ ತುರುಕಿಕೊಂಡು ಅಚ್ಯುತನಿಗೂ ತಿಳಿಸದೆ ಸದಾ ಊರ ಬಸ್ಸು ಹತ್ತಿದ್ದ.

ಬೆಳಬೆಳಿಗ್ಗೆಯೇ ಹೇಳದೆ ಕೇಳದೆ ಮನೆಗೆ ಬಂದಿಳಿದಿದ್ದ ಮಗನನ್ನು ನೋಡಿ ಅಮ್ಮ ಅಚ್ಚರಿ ಸಂತೋಷದಿಂದಲೇ ಎದುರುಗೊಂಡಿದ್ದರೂ ದೊಡ್ಡ ಹೆಗಡೇರು ಮಾತ್ರ ಏನೋ ಅಪಶಕುನ ಊಹಿಸಿದವರಂತೇ ಹುಬ್ಬು ಗಂಟಿಕ್ಕಿದ್ದರು.

ಸಂಜೆಯ ಹೊತ್ತಿಗೆ ಅಮ್ಮನ ಬಳಿ 'ಅಮ್ಮಾ, ನಂಗೆ ಬೆಂಗಳೂರಿನಲ್ಲಿ ಇರಲಿಕ್ಕಾಗೂದಿಲ್ಲ. ಅಲ್ಲಿ ನಂಗೆ ಕೆಲಸಾನೂ ಸಿಗೂದಿಲ್ಲ. ನಾನು ಅಪ್ಪನಿಗೆ ಸಹಾಯ ಮಾಡಿಕೊಂಡು ಇಲ್ಲೇ ಇರ್ತೇನೆ' ಎಂದು ಅಲವತ್ತುಕೊಂಡಿದ್ದ. ಅವನ ಈ ಮಾತು ರಾತ್ರಿ ಅಮ್ಮನ ಮೂಲಕ ಹೆಗಡೇರನ್ನು ತಲುಪಿತ್ತು. ಇದನ್ನು ಮೊದಲೇ ಊಹಿಸಿದವರಂತೆ ಹೆಗಡೇರು 'ಇನ್ನೊಂದೆರಡು ದಿನ ಮನೆಯಲ್ಲಿಯೇ ಇದ್ದು ತಿರುಗಿ ಬೆಂಗಳೂರಿಗೆ ಹೋಗಲಿ ಅವ. ಮದುವೆ ಆಗುವವರೆಗೆ ಮನೆಯಲ್ಲಿ ಇರೂದು ಬ್ಯಾಡ. ಅಲ್ಲೇನೂ ನೌಕರಿ ಮಾಡಬೇಕಾಗಿಲ್ಲ. ತಿಂಗಳ ಕರ್ಚಿಗೆ ಹಣ ಕಳಿಸ್ತೇನೆ ನಾನೇ' ಎಂದಿದ್ದರು. ಅಪ್ಪನ ಮಾತನ್ನು ಮರುದಿನ ಅಮ್ಮನ ಬಾಯಲ್ಲಿ ಕೇಳಿದ ಸದಾ 'ಇದೆಂತಾ ಮಳ್ಳು ವೇಷ ಅಮ್ಮಾ? ಆ ಬೆಂಗಳೂರು ನರಕ, ನನ್ನತ್ರ ಖಾಲಿ ಪೀಲಿ ಕೂತ್ಕಂಡಿರಲಿಕ್ಕೆ ಆಗೂದಿಲ್ಲ ಅಲ್ಲಿ. ನಾ ಇಲ್ಲೇ ಇರ್ತೇನೆ' ಎಂದಿದ್ದ. ಅಮ್ಮ ಸಾವಧಾನದಿಂದ ವಿವರಿಸಿದ್ದಳು. 'ಇಲ್ಲಾ ಮಾಣಿ... ಅಪ್ಪ ಹಾಗೆ ಸುಮ್ಮಸುಮ್ಮನೆ ಏನೂ ಹೇಳೂದಿಲ್ಲ. ಯೋಚಿಸಿಯೇ ಹೇಳ್ತಾರೆ. ಈಗ ಎಷ್ಟೇ ಆಸ್ತಿ ಪಾಸ್ತಿ ಇದ್ದರೂ ಹಳ್ಳಿ ಮನೆಯಲ್ಲಿ ಇರುವ ಹುಡುಗರಿಗೆ ಹೆಣ್ಣು ಸಿಗ್ತಾ ಇಲ್ಲ. ಸಿಕ್ಕಿದ್ರೂ ಏನಾದ್ರೂ ಒಂದು ಐಬು ಇದ್ದವೇ. ಆರಿಸಿ ಬಿಟ್ಟವ್ರೇ ಆಗಿರ್ತಾರೆ. ಎಲ್ಲ ಹೆಣ್ಮಕ್ಕಳಿಗೂ ಬೆಂಗಳೂರಿನಲ್ಲಿರುವವರ ಮದುವೆಯಾಗೂ ಹುಚ್ಚು ಹಿಡಿದಿದೆ ಈಗ. ಆ ಕಲ್ಲೇಶ್ವರ ರಾಮ ಹೆಗಡೇರ ಮಗನನ್ನು ನೋಡು. ಏನ್ ಕಮ್ಮಿ ಆಗಿದೆ ಅವಂಗೆ? ನಮಗಿಂತ ಇಪ್ಪತ್ತು ಕ್ವಿಂಟಲ್ ಜಾಸ್ತಿ ಅಡಿಕೆ ತೆಗಿತಾನೆ ಅವ್ನು. ಆದ್ರೂ ಅವನ ಮಗನಿಗೆ ಹೆಣ್ಣು ಹುಡುಕುವಷ್ಟರಲ್ಲಿ ಹತ್ತು ವರ್ಷ ಹೆಚ್ಚು ಮುದುಕನಾದ ಅವ. ಎಲ್ಲರದೂ ಒಂದೇ ಮಾತು. ಹುಡುಗ ಮನೆಲಿದ್ದಾನಾ? ಹಾಗಾದ್ರೆ ಬ್ಯಾಡ. ಅಷ್ಟೆ. ಚಂದ, ಆಸ್ತಿ, ನಡತೆ ಎಲ್ಲ ಲಕ್ಷ್ಯಕ್ಕೇ ಇಲ್ಲ. ಕೊನೆಗೆ ಎಲ್ಲೂ ಸಿಗದೆ ಕಲಘಟಗಿಯಿಂದ ಲಿಂಗಾಯಿತರ ಹುಡುಗಿಯನ್ನು ತಂದುಕೊಂಡ. ಅಡಿಕೆ ತೋಟಕ್ಕೆ ಗೊಬ್ಬರ ಹೊರಲಿಕ್ಕೆ ಒಂದು ಆಳು ಸಿಗ್ತು ಅಂತ ಎಲ್ಲರೂ ಆಡ್ಕೋತಾರಂತೆ. ನಿನ್ ಕತೆನೂ ಹಂಗೇ ಆಗಬಾರದು ಅಂತ ಅಪ್ಪನ ಕಾಳಜಿ ಮಗಾ... ಏನೋ ಒಂದು ಹೇಳಿ ಒಂದ್ಸಲ ಮದ್ವೆ ಆಗ್ಬಿಟ್ರೆ ಆಮೇಲೆ ಎಲ್ಲ ಸರಿಯಾಗ್ತದೆ. ಮನೆಗೆ ಬಂದು ಉಳಿದುಕೊಂಡರಾಯ್ತು' ಎಂದೆಲ್ಲ ಸಂತೈಸಿದಳು.

ಸದಾನಿಗೆ ಇದೆಲ್ಲವೂ ವಿಚಿತ್ರವಾಗಿ ಕಂಡಿತ್ತು. 'ಅಲ್ಲಮ್ಮಾ, ನಾನು ನನ್ನ ಗುಣಕ್ಕಿಂತ ಎಲ್ಲಿರ್ತಿನಿ, ಏನು ಕೆಲಸ ಮಾಡ್ತೀನಿ ಎನ್ನೋದು ಮುಖ್ಯ ಅನ್ನುವವರ ಜತೆ ನೆಮ್ಮದಿಯಿಂದ ಸಂಸಾರ ಮಾಡ್ಲಿಕ್ಕಾಗ್ತದಾ? ನಂಗೆ ಮದ್ವೆನೇ ಆಗದಿದ್ರೂ ಪರ್ವಾಗಿಲ್ಲ. ಆದ್ರೆ ಹಂಗೆಲ್ಲ ಇಲ್ಲದ ನೌಕರಿ ಇದೆ ಅಂತ ಹೇಳಿ ನಾಟಕವಾಡಿ ಮದ್ವೆ ಆಗ್ಲಿಕ್ಕಾಗೂದಿಲ್ಲ' ಎಂದಿದ್ದ. ಅದಕ್ಕೆ ಅಮ್ಮ ಸಿಟ್ಟಿನಿಂದ 'ಎಲ್ಲಾರೂ ಗುಣ ನೋಡಿ ಮದ್ವೆ ಆಗೂದೇ ಆಗಿದ್ರೆ ನಾನು ನಿಮ್ಮಪ್ಪನ್ನ ಮದ್ವೆ ಆಗ್ತಿರಲಿಲ್ಲ. ತಿಳ್ಕೊ. ಗಂಡನ ಮನೆಯಲಿ ಹೆಂಗ್ ಬಂತೋ ಹಾಗೆ ಹೊಂದಿಕೊಂಡು ಹೋಗಬೇಕು ಹೆಣ್ಮಕ್ಕಳು. ಅದು ಪದ್ಧತಿ. ಅದು ಬಿಟ್ಟು ಬೆಂಗಳೂರಿನಲ್ಲಿದ್ದವನೇ ಬೇಕು ಅಂತ ದಿಮಾಕು ಮಾಡುವವರಿಗೆ ಹೀಗೇ ಮಾಡಬೇಕು. ನಾ ಹೇಳೂದು ಹೇಳಿದ್ದೇನೆ. ನಿಂಗೆ ಆಗೂದಿಲ್ಲ ಅಂದ್ರೆ ಅಪ್ಪನತ್ರ ಡೈರೆಕ್ಟ್ ಮಾತಾಡು' ಎಂದು ಹೇಳಿ ಎದ್ದು ಹೋಗಿದ್ದಳು. ಸದಾನಿಗೀಗ ಅಡಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡ ಅನುಭವ ಆಗಿತ್ತು. ಅಪ್ಪನೆದುರು ನಿಂತು ಮಾತನಾಡುವ ಧೈರ್ಯ ಅವನಿಗೆ ಯಾವತ್ತೂ